# ಜನಸಂಪರ್ಕ ಸಾಧನ ಸಾಮಾಜಿಕ ಮಾಧ್ಯಮ

**ತೇಜಸ್ವಿನಿ ಶೇಖರ್**
ಸ್ಟಾರ್ ಸುವರ್ಣದ 'ಸಂಘರ್ಷ'ದ ಇಂದಿರಾ ಸತ್ಯಮೂರ್ತಿ



◆ 'ನೀಲಿ' ಮತ್ತು 'ಸಂಘರ್ಷದ'ದಲ್ಲಿ ನಿಮ್ಮ ಪಾತ್ರದ ವೈರುಧ್ಯ ಹೇಳಿ..

'ನೀಲಿ'ಯಲ್ಲಿ ರೇಖಾ ಸಂಪೂರ್ಣ ನೆಗೆಟಿವ್ ಪಾತ್ರ. ಆಕೆ ನಾಯಕನನ್ನು ಪ್ರೀತಿಸುತ್ತಾಳೆ. ಅವನನ್ನು ಪಡೆದುಕೊಳ್ಳಲು ಎಂತಹ ಕೃತ್ಯವನ್ನಾದರೂ ಮಾಡಲು ಹಿಂದೇಟು ಹಾಕುವುದಿಲ್ಲ. ತಾನು ಆಕರ್ಷಣೀಯವಾಗಿ ಕಾಣಿಸಿಕೊಳ್ಳಬೇಕು. ಅದಕ್ಕಾಗಿ ಚಂದದ ಅಲಂಕಾರ ಮಾಡಿಕೊಳ್ಳಬೇಕು ಎಂದು ಬಯಸುತ್ತಾಳೆ. ಇಂದಿರಾ ಪಾತ್ರಕ್ಕೂ ಅದಕ್ಕೂ ತುಂಬ ಅಂತರವಿದೆ. ಮಾತ್ರವಲ್ಲ ಪೂರ್ಣ ವಿರುದ್ಧವಾಗಿದೆ. ಇಲ್ಲಿ ಜಿಲ್ಲಾಧಿಕಾರಿ ಒಳ್ಳೆಯವಳು. ಜನರಿಗೆ ಒಳ್ಳೆಯದನ್ನೇ ಮಾಡಬೇಕು ಎಂದು ಹಂಬಲಿಸುತ್ತಾಳೆ. ತನ್ನ ಅಧಿಕಾರವನ್ನು ಸಮರ್ಥವಾಗಿ ನಿಭಾಯಿಸುತ್ತಾಳೆ. ಅವಳು ಯಾವುದೇ ಅನ್ಯಾಯವನ್ನು ನೋಡಿ ಸುಮ್ಮನಿರುವುದಿಲ್ಲ. ತುಂಬ ಸರಳ ಜೀವಿಯಾದ ಆಕೆ ಬಾಹ್ಯ ಅಲಂಕಾರಕ್ಕೆ ಅಷ್ಟು ಮಹತ್ವ ಕೊಡುವುದಿಲ್ಲ.

◆ ಜಮೀನ್ದಾರಿ ವ್ಯವಸ್ಥೆಯಲ್ಲಿ ನಿಷ್ಠಾವಂತ ಅಧಿಕಾರಿಯ ಸವಾಲುಗಳು ಹೇಗಿರುತ್ತವೆ?

ನಿಷ್ಠೆಯಿಂದ ಇದ್ದಾರೆ ಎಂದರೆ ಆಪತ್ತು ಬರುವ ಎಲ್ಲ ಸಾಧ್ಯತೆಯೂ ಇದೆ ಎಂದರ್ಥ. ಒಳ್ಳೆಯ ಕೆಲಸಗಳನ್ನು ದುಷ್ಟ ಕಾರ್ಯ ಎಂದು ಬಿಂಬಿಸುವ ಉದ್ದೇಶಿತ ತಂತ್ರಗಳು ನಡೆಯುತ್ತಲೇ ಇರುತ್ತವೆ. ಅಂತಹದ್ದರ ವಿರುದ್ಧ ಜೀವವನ್ನೇ ಪಣಕ್ಕಿಟ್ಟು ಹೋರಾಡಬೇಕಾಗುತ್ತದೆ. ಕರ್ತವ್ಯ ನಿಷ್ಠೆಯಿಂದಲೇ ಮೇಲಿಂದ ಮೇಲೆ ವರ್ಗ ಆಗಬೇಕಾಗುತ್ತದೆ. ಈಗ ಪಾಪನಾಶಂಗೆ ಬಂದಿರುವುದು ಅದೇ ಕಾರಣಕ್ಕೆ. ಇಲ್ಲಿ ಭೈರಾದೇವಿ ಎಂಬುವಳು ಇದ್ದಾಳೆ. ಆ ಪ್ರದೇಶವನ್ನು ಆಕೆ ಸಂಪೂರ್ಣ ಹತೋಟಿಗೆ ತೆಗೆದುಕೊಂಡಿರುತ್ತಾಳೆ. ಅಲ್ಲಿಗೆ ಹೋದರೆ ಹೇಗೆ ಕೆಲಸ ಮಾಡುತ್ತಾಳೆ ಎಂದು ವ್ಯವಸ್ಥೆ ವರ್ಗಮಾಡಿದೆ. ಅಲ್ಲಿಗೆ ಬಂದ ಮೇಲೆ ಆಕೆಯ ಜೊತೆ ಜಿಲ್ಲಾಧಿಕಾರಿ ನಡೆಸುವ ಸಂಘರ್ಷವೇ ಕಥೆಯ ತಿರುಳು.

◆ ಬಣ್ಣದ ಲೋಕದ ಪಯಣ ಆರಂಭವಾಗಿದ್ದು ಹೇಗೆ?

ನಾನು ನಟಿಯಾಗಬೇಕೆಂದು ಅಂದುಕೊಂಡೇ ಇರಲಿಲ್ಲ. ನನಗಿದು ಹೊಸ ಜಗತ್ತು. ಬಿಕಾಂ ಮುಗಿದಿತ್ತು, ಸಿಎ ಮಾಡಬೇಕು ಎನ್ನುವ ಯೋಚನೆಯಲ್ಲಿದ್ದೆ. ಫೇಸ್‌ಬುಕ್‌ನಲ್ಲಿ ನನ್ನ ಫೋಟೊ ನೋಡಿ ಆಡಿಷನ್ ನೀಡಲು ಯಾರೋ ಫೋನ್ ಮಾಡಿದರು. ಹೇಗೂ ರಜೆ ಇದೆ ಈ ಬಿಡುವಿನಲ್ಲಿ ಒಂದು ಪ್ರಯತ್ನ ಮಾಡಿನೋಡೋಣ ಎಂದು ಆಡಿಷನ್ ನೀಡಿದೆ. 'ಮಧುಬಾಲ'ಕ್ಕೆ ಅವಕಾಶ ಸಿಕ್ಕಿತು. ಅದಕ್ಕಾಗಿ ಯಾವ ತಯಾರಿಯೂ ಆಗಿರಲಿಲ್ಲ. ಅದು ನನಗೆ ಪಾಠಶಾಲೆಯಂತೆ ಆಯಿತು. ಅಲ್ಲಿನ ಭಾಷೆ ವಾತಾವರಣದ ಜೊತೆ ಅಭಿನಯವನ್ನೂ ಕಲಿತೆ. ಅದಾದ ಮೇಲೆ 'ಸೌಭಾಗ್ಯವತಿ' ಅಲ್ಲಿಂದ ತಮಿಳು ಮತ್ತು ತೆಲುಗಿನಲ್ಲೂ ಅವಕಾಶ ಸಿಕ್ಕಿತು. ನಂತರ 'ಮಹಾನದಿ' ಕನ್ನಡಕ್ಕೆ ಬಂದೆ. ಮತ್ತೆ ತಮಿಳು– ಕನ್ನಡ ಒಂದಾದ ಮೇಲೆ ಅವಕಾಶಗಳು ಸಿಕ್ಕವು. ಈಗ ಇಲ್ಲಿದ್ದೇನೆ, ಚಾರ್ಟರ್ಡ್ ಅಕೌಂಟೆಂಟ್ ಆಗಿಲ್ಲ ಎಂಬ ಬೇಸರ ಇಲ್ಲ. ಇದನ್ನೇ ವೃತ್ತಿ ಎಂದು ಭಾವಿಸಿದ್ದೇನೆ. ತೃಪ್ತಿಯಿಂದ ನನ್ನ ಕೆಲಸವನ್ನು ಮಾಡುತ್ತಿದ್ದೇನೆ.

◆ ಬೆಂಗಳೂರನ್ನು ಹೊಂದಿಸಿಕೊಳ್ಳಲು ನಡೆದ ಸಂಘರ್ಷ ಹೇಳಿ...

ನಾನು ಹುಟ್ಟಿ ಬೆಳೆದಿದ್ದು ಮೈಸೂರು. ಅಪ್ಪ ಚಂದ್ರಶೇಖರ್ ಹಾಸನದ ಮೂಲದವರು, ಮೈಸೂರಿನಲ್ಲಿ ವೈದ್ಯರಾಗಿದ್ದಾರೆ. ಅಮ್ಮ ರೂಪ ಶೇಖರ್ ನನಗೆ ಮೈಸೂರು ಮತ್ತು ಹಾಸನದ ಒಡನಾಟ ಮಾತ್ರ ಇತ್ತು. ಬೆಂಗಳೂರಿನಲ್ಲಿ ಮಾವನ ಮನೆಯಿತ್ತು ಎರಡು ಮೂರು ಬಾರಿ ಬಂದಿದ್ದೆ ಅಷ್ಟೇ. ಮೊದಲ ಧಾರಾವಾಹಿಗೆ ಅವಕಾಶ ಸಿಕ್ಕ ನಂತರ ನಾನು ಇಲ್ಲೇ ಮನೆಯನ್ನು ಮಾಡಿಕೊಂಡು ಉಳಿದುಕೊಂಡೆ. ಬೆಂಗಳೂರಿಗೆ ಬಂದು ಇರುತ್ತೇನೆ ಎಂದುಕೊಳ್ಳಲಿಲ್ಲ. ಇಲ್ಲಿಗೆ ಬಂದಿದ್ದಾಗಲಿ ನಟಿಯಾಗಿದ್ದಾಗಲಿ ಎಲ್ಲ ಆಕಸ್ಮಿಕ ಅಷ್ಟೆ. ಹೊಂದಾಣಿಕೆ ಹೇಳುವಂತಹ ಸಮಸ್ಯೆ ಆಗಲಿಲ್ಲ.

◆ ನಿಮ್ಮ ಖಾಸಗಿ ಮತ್ತು ಸಾರ್ವಜನಿಕ ಜೀವನ ಹೇಗಿದೆ?

ಅಂತಹ ವ್ಯತ್ಯಾಸ ಏನೂ ಇಲ್ಲ ಎಂದು ಅನ್ನಿಸುತ್ತದೆ. ಏಕೆಂದರೆ ಮನೆಯಲ್ಲೇ ಇರಲು ನಾನು ಹೆಚ್ಚು ಇಷ್ಟಪಡುತ್ತೇನೆ. ಪಾರ್ಟಿ– ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಅಷ್ಟು ಇಷ್ಟ ಆಗಲ್ಲ. ನನ್ನ ಕೆಲಸ ಬಿಟ್ಟರೆ ಮನೆ ಅಷ್ಟೇ ನನ್ನ ಪ್ರಪಂಚ. ಅಗತ್ಯ ಇದ್ದರೆ ಮಾತ್ರ ಮನೆಯಿಂದ ಆಚೆ ಬರುತ್ತೇನೆ. ಹೊರ ಹೋದಾಗ ಗುರ್ತಿಸಿ ಮಾತನಾಡಿಸಿದಾಗ ಖುಷಿ ಆಗುತ್ತದೆ. ಸೆಲ್ಫಿ ತೆಗೆದುಕೊಂಡಾಗ ಹೆಮ್ಮೆ ಅನ್ನಿಸುತ್ತದೆ. ನಮ್ಮನ್ನು ಗುರುತಿಸುತ್ತಾರೆ ಎನ್ನುವ ಭಾವನೆ ನನ್ನ ಕೆಲಸದ ಬಗ್ಗೆ ಕೃತಜ್ಞತೆಯನ್ನು ಮೂಡಿಸುತ್ತದೆ.

◆ ಸಾಮಾಜಿಕ ಮಾಧ್ಯಮವನ್ನು ಹೇಗೆ ನಿರ್ವಹಣೆ ಮಾಡುತ್ತೇನೆ.

ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೋಲ್ ಮಾಡುವುದು ನೆಗೆಟಿವಿಟಿ ಹೆಚ್ಚಾಗಿದೆ. ಈ ಮಾಧ್ಯಮ ಜನಸಮುದಾಯದ ಜೊತೆ ಸಂಪರ್ಕ ಸಾಧಿಸಲು ಸಾಧನ ಇದ್ದಂತೆ. ಇಲ್ಲಿ ನನ್ನ ಮತ್ತು ವೀಕ್ಷಕರ ನೇರ ಸಂಪರ್ಕ ಇರುತ್ತದೆ. ಅನೇಕರು ಅಭಿನಯಕ್ಕೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡುತ್ತಾರೆ. ಫೋಟೊಗಳ ಕೊಲಾಜ್ ಮಾಡಿ ಕಳುಹಿಸುತ್ತಾರೆ. ಅವರ ಅಭಿಮಾನ ಖುಷಿಯನ್ನು ನೀಡುತ್ತದೆ. ಇನ್ನೂ ಕೆಲವರು ಋಣಾತ್ಮಕವಾದ ಅಭಿಪ್ರಾಯವನ್ನೂ ನೀಡುತ್ತಾರೆ. ಸಮಾಜದಲ್ಲಿ ಎಲ್ಲ ರೀತಿಯ ಅಭಿಪ್ರಾಯಗಳೂ ವ್ಯಕ್ತವಾಗಿರುತ್ತವೆ. ನನಗೆ ಏನು ಬೇಕೋ ಅದನ್ನು ಮಾತ್ರ ಸ್ವೀಕರಿಸುತ್ತೇನೆ. ವೀಕ್ಷಕರ ನಿರೀಕ್ಷೆಗಳು ಏನು ಅದನ್ನು ತಿಳಿಯಲು ಇಲ್ಲಿ ಸಹಾಯ ಆಗುತ್ತದೆ.

■ ರಾಘವೇಂದ್ರ ಕೆ.